ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

ದಿನಾಂಕ: 20.02.2018

## ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರದ ಆರ್.ಪಿ.ಸಿ ಲೇಔಟ್‌ನ ನಿವಾಸಿಯಾಗಿರುವ ವೈದ್ಯರು ಬಿಡದಿ ಹೋಬಳಿ, ಮಂಚನಾಯ್ಕನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬಿಲ್ಲ ಕೆಂಪನಹಳ್ಳಿ ಸರ್ವೆ ನಂ.43/6 ರಲ್ಲಿ 0–33 ಗುಂಟೆ ಕೃಷಿ ಜಮೀನು ಹೊಂದಿದ್ದು, ಸದರಿ ಕೃಷಿ ಜಮೀನನ್ನು ಹಾಸ್ಪಿಟಲ್ ನಿರ್ಮಾಣದ ಉದ್ದೇಶಕ್ಕಾಗಿ ವಾಣಿಜ್ಯ ಉಪಯೋಗದ ಬದಲಾವಣೆ ಮಾಡಿಸಲು ಮೂಲಭೂತ ಸೌಕರ್ಯಗಳ ಬಗ್ಗೆ ಎನ್.ಓ.ಸಿ ಪಡೆಯಲು ಮಂಚನಾಯಕನಹಳ್ಳಿ ಗ್ರಾಮ ಪಂಚಾಯ್ತಿ ಕಛೇರಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ, ಶ್ರೀ.ಶಮೀದ್ ಓಲೆಕರ್, ಪಂಚಾಯ್ತಿ ಅಭಿವೃದ್ದಿ ಅಧಿಕಾರಿ, ಮಂಚನಾಯ್ಕನಹಳ್ಳಿ ಗ್ರಾಮ ಪಂಚಾಯ್ತಿ ರವರು ಎನ್.ಓ.ಸಿ ನೀಡಲು ರೂ.1,00,000/– ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತಾರೆ.

ದಿನಾಂಕ:20–02–2018 ರಂದು ಶ್ರೀ.ಶಮೀದ್ ಓಲೆಕಾರ್ ರವರು ದೂರುದಾರರಿಂದ ರೂ.1,00,000/– ಲಂಚದ ಹಣವನ್ನು ಸ್ವೀಕರಿಸಿದ್ದು, ಎಸಿಬಿ ರಾಮನಗರ ಜಿಲ್ಲಾ ಠಾಣೆಯ ಅಧಿಕಾರಿಗಳು ದಾಳಿ ನಡೆಸಿರುತ್ತಾರೆ. ಲಂಚದ ಹಣವನ್ನು ಸ್ವಾಧೀನಪಡಿಸಿಕೊಂಡು ಇವರನ್ನು ದಸ್ತಗಿರಿ ಮಾಡಿದ್ದು, ಪ್ರಕರಣದ ತನಿಖೆ ಮುಂದುವರೆದಿದೆ.